**SPL.C. 5046/2025**

ಚಾ.ಸಾ **:12** ಪ್ರಾ.ಸಾ **:4**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ಮಹಾದೇವ |
| ಗಂಡ ಹೆಸರು | : | ಜಂಬಯ್ಯ ಪಂಚಮುಖಿ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಪಿ.ಐ. |
| ವಿಳಾಸ | : | ರಾಯಚೂರು |

ಸಾಕ್ಷಿಗೆ ದಿನಾಂಕ **25-02-2026** ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯವಿಚಾರಣೆ **:** ಮಾನ್ಯ ಸರ್ಕಾರಿ ಅಭಿಯೋಜಕರಿಂದ **:**

ದಿನಾಂಕ **21-10-2024** ರಿಂದ ನಾನು ರಾಯಚೂರು ಜೆಸ್ಕಾಂ ಜಾಗೃತ ಧಳದಲ್ಲಿ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 21-10-2024 ರಂದು ನಾನು ಈ ಪ್ರಕರಣದ ತನಿಖೆಯನ್ನು ಲಕ್ಷ್ಮೀ ಎಂಬ ಪಿ.ಎಸ್.ಐ, ಇವರಿಂದ ವಹಿಸಿಕೊಂಡಿದ್ದೇನೆ. ದಿನಾಂಕ 06-02-2025 ರಂದು ನಾನು ತಹಶೀಲದ್ದಾರರಿಗೆ ಪಹಣಿಗಳನ್ನು ಪೂರೈಸುವಂತೆ ಪತ್ರ ಬರೆದಿದ್ದೇನೆ.

3. ದಿನಾಂಕ 07-03-2025 ರಂದು ನಾನು ಇಬ್ಬರು ಆರೋಪಿತರ ಆಧಾರ ಕಾರ್ಡಿನ ಪ್ರತಿಗಳನ್ನು ಪಡೆದಿದ್ದೇನೆ. ದಿನಾಂಕ 09-04-2025 ರಂದು ನಾನು ಒಟ್ಟು 8 ಪಹಣಿ ಪತ್ರಿಕೆಗಳನ್ನು ತಹಶೀಲ್ದಾರಿಂದ ಪಡೆದಿದ್ದೇನೆ. ಸಾಕ್ಷಿ ಗುರುತಿಸಿದ ಪಹಣಿ ಪತ್ರಿಕೆಗಳನ್ನು ನಿ.ಪಿ.5 ರಿಂದ 12 ಎಂದು ಗುರುತಿಸಲಾಯಿತು.

4. ಸರ್ವೆ ನಂಬರ್ 141 ರಲ್ಲಿರುವ 13 ಗುಂಟೆ ಜಮೀನುದಲ್ಲಿ ಈ ಕೇಸಿನ ಪಂಪ್ ಸೆಟ್ ಮತ್ತು ವಿದ್ಯುತ್ ಸರಬರಾಜನ್ನು ಅದಕ್ಕೆ ಪಡೆಯಲಾಗಿತ್ತು. ಆ ಜಮೀನಿನ ಪಹಣಿ ನಿ.ಪಿ.12 ರಲ್ಲಿದೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಆ ಜಮೀನು 2 ನೇ ಆರೋಪಿ/ರಮೇಶ ಬಾಬು ಈತನ ಹೆಸರಿನಲ್ಲಿ ಇತ್ತು.

5. ಆರೋಪಿ ಸಂ. 1 ಈತನು ನಿ.ಪಿ.12 ರಲ್ಲಿರುವ ಜಮೀನನ್ನುಲೀಸ್ ಪಡೆದು ಸಾಗುವಳಿ ಮಾಡುತ್ತಿದ್ದನು. 2 ನೆ ಆರೋಪಿ ಆ ಜಮೀನಿನ ಮಾಲೀಕನುಇದ್ದದ್ದರಿಂದ ನಾನು ಇಬ್ಬರು ಆರೋಪಿತರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ.

**SPL.C. 5046/2025**
ಚಾ.ಸಾ **:12** ಪ್ರಾ.ಸಾ **:4**

<u>ಪಾಟೀ ಸವಾಲು**: 1** ಮತ್ತು **2** ನೇ ಆರೋಪಿ ಪರ ವಕೀಲರಿಂದ**:**</u>

6. ನಾನು ತನಿಖಾಕಾಲದಲ್ಲಿ ಘಟನಾ ಸ್ಥಳಕ್ಕೆ ಹೋಗಿಲ್ಲ. 1 ನೇ ಆರೋಪಿ ಲೀಸ್‌ದಿಂದ ಜಮೀನು ಸಾಗುವಳಿ ಮಾಡುತ್ತಿದ್ದ ಕುರಿತು ಯಾವುದೇ ದಾಖಲೆಗಳನ್ನು ಪಡೆದಿಲ್ಲ. ಚಾ.ಸಾ7 ಈತನು ನಿ.ಪಿ.12 ರಲ್ಲಿರುವ ಜಮೀನಿನಲ್ಲಿ ವಿದ್ಯುತ್ ಸರಬರಾಜು ಪಡೆಯಲಾಗಿದೆ ಎಂದು ಹೇಳಿಕೆ ನೀಡಿದ್ದಾನೆ. ಪಂಪ್ ಸೆಟ್ಟಿನ ಮತ್ತು ವೈಯರಿನ ಛಾಯಾ ಚಿತ್ರವನ್ನು ತನಿಖಾ ಕಾಲದಲ್ಲಿ ತೆಗೆಸಿಲ್ಲ. ನಿ.ಪಿ. 12 ರಲ್ಲಿ ನೀರಾವರಿ ಮೂಲ ಕಾಣಿಸಿಲ್ಲ ಅಂದರೆ ಸರಿ.

7. ನಾನು ಸರಿಯಾದ ತನಿಖೆ ಮಾಡದೆ ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರು ವಿದ್ಯುತ್ ಕಳ್ಳತನವನ್ನು ಮಾಡಿಲ್ಲ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು